# ಸಂಜೀವಿನಿ

(ಖಾಸಗಿ ಪ್ರಸಾರಕ್ಕೆ ಮೀಸಲು)



ಸಂಪಾದಕ ಮಂಡಳಿ;
ಡಾ ಗೋಪಾಲ ದಾಬಡೆ,
ಶ್ರೀ ಎಂ ಸುದರ್ಶನರಾಜ,
ಡಾ ಶುಭದಾ ಸಿ,
ಶ್ರಿ ಸುನೀಲ ಕುಲಕರ್ಣಿ,
ಶ್ರೀಮತಿ ನರ್ಮದಾ ಕುರ್ತಕೋಟಿ.



ಸೂಕ್ತ ವೈದ್ಯಕೀಯ ಸಲಹೆ, ಆವಶ್ಯಕ ಮತ್ತು ಉತ್ತಮ ಗುಣಮಟ್ಟದ ಔಷಧಕ್ಕೆ ಹಾಗೂ ಜನಸಾಮಾನ್ಯರಿಗೆ ಕೈಗೆಟಕುವ ಬೆಲೆಯಲ್ಲಿ ಔಷಧ ದೊರಕುವದಕ್ಕೆ ಮೀಸಲಾದ ಏಕೈಕ ಕನ್ನಡ ತ್ರೈಮಾಸಿಕ.

| ಸಂಪುಟ 3 | ಸಂಚಿಕೆ 10 | ಜೂನ್ 2018 |
|---|---|---|


## ರಾಷ್ಟ್ರೀಯ ಆರೋಗ್ಯ ಸಭೆ - 3

### *ಆರೋಗ್ಯ ಮತ್ತು ಅರೋಗ್ಯಸೇವೆಗಳನ್ನು ಮೂಲಭೂತ ಹಕ್ಕಾಗಿ ಮಾಡುವ ಸಮಯ ಈಗ ಬಂದಿದೆ !*

ಅರೋಗ್ಯ ಒಂದು ಮೂಲಭೂತ ಹಕ್ಕು ಎನ್ನುವ ವಿಷಯ ಹೊಸತಲ್ಲ. ಆರೋಗ್ಯ ಮೂಲಭೂತ ಹಕ್ಕಾಗಬೇಕೆಂದು ವಿಶ್ವಾದ್ಯಂತ ವಿವಿಧ ಸಂಘಟನೆಗಳ, ಆಂದೋಲನಗಳ ಹೋರಾಟಗಳು ನಡೆದಿವೆ. ಆರೋಗ್ಯದ ಹಕ್ಕಿನ ವಿಷಯದಲ್ಲಿ **1978ರ** **<u>ಅಲ್ಮಾ ಆಟ ಘೋಷಣೆ</u>** ಒಂದು ಮುಖ್ಯ ಮೈಲಿಗಲ್ಲು. 2018ರ ಇಸವಿಗೆ ಅಲ್ಮಾ ಆಟ ಘೋಷಣೆ ಬಂದು 40 ವರ್ಷಗಳಾಗಿದೆ ಆದಾಗ್ಯೂ ಸಹ ವಿಶ್ವ ಮಟ್ಟದಲ್ಲಿ ಆರೋಗ್ಯದ ವಿಷಯದಲ್ಲಿ, ಅದು ಸಾಮಾಜಿಕ ನಿರ್ಧಾರಕಗಳ ವಿಷಯದಲ್ಲಾಗಲಿ (ಆಹಾರ, ನೀರು ಇತ್ಯಾದಿ), ಅರೋಗ್ಯ ಸೇವೆಗಳ ಲಭ್ಯತೆಯ ವಿಷಯದಲ್ಲಾಗಲಿ ಅಥವಾ ಅರೋಗ್ಯ ಪರಿಣಾಮಗಳಲ್ಲಾಗಲಿ - ಹಿಂದೆಂದೂ ಕಾಣದಂತ ಅಸಮಾನತೆಗಳಿಂದ ಕೂಡಿದೆ.

## ಭಾರತದಲ್ಲಿನ ಆರೋಗ್ಯ ವ್ಯವಸ್ಥೆ - ಒಂದು ಕಿರು ಪರಿಚಯ

ಭಾರತೀಯ ಅರೋಗ್ಯ ವ್ಯವಸ್ಥೆಯ ಲಕ್ಷಣ ಅಸಮರ್ಪಕ ಹಣ ಹೂಡಿಕೆ, ಕಳಪೆ ಗುಣಮಟ್ಟದ ದುರ್ಬಲ ಸಾರ್ವಜನಿಕ ಅರೋಗ್ಯ ವ್ಯವಸ್ಥೆ, ಹಾಗೂ ಅದೇ ಸಮಯ ಅನೈತಿಕ, ಅನಗತ್ಯ, ವ್ಯಾಪಾರೀಕೃತ ಖಾಸಗಿ ಕ್ಷೇತ್ರ. ಸ್ವಾತಂತ್ರ್ಯದ 70 ವರ್ಷಗಳಲ್ಲಿ ಆರೋಗ್ಯವನ್ನು ಜನರಿಗೆ ತಲುಪಿಸಲು ಕೆಲವೊಂದು ಪ್ರಯತ್ನಗಳೂ ನಡೆದಿದ್ದರೂ ಸಹ, ಸಾರ್ವತ್ರಿಕ, ಉತ್ತಮ ಗುಣಮಟ್ಟದ ಅರೋಗ್ಯ ಸೇವೆಗಳನ್ನು ಕೊಡುವಲ್ಲಿ ವಿಫಲವಾಗಿದೆ. 90ರ ದಶಕದಲ್ಲಿ ನವ-ಉದಾರೀಕರಣದ ನೀತಿಗಳಡಿಯಲ್ಲಿ ಸಾರ್ವಜನಿಕ ವ್ಯವಸ್ಥೆಗಳನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸಿ ಹಾಗೂ ಖಾಸಗಿ ಕ್ಷೇತ್ರಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ

ನೀತಿಗಳು. ದೇಶದಲ್ಲಿನ ವಿವಧ ಸಂಘಟನೆಗಳ, ಆಂದೋಲನಗಳ ಹೋರಾಟಗಳ ಫಲವಾಗಿ 2005ರಲ್ಲಿ ಆಗಿನ ಸರ್ಕಾರ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವನ್ನು ದೇಶದಲ್ಲಿ ಪ್ರಾರಂಭಿಸಲಾಯಿತು. ಈ ಅಭಿಯಾನದ ಮೂಲಕ ಆರಂಭದಲ್ಲಿ ಸಾರ್ವಜನಿಕ ಆರೋಗ್ಯ ಸೇವೆಗಳಿಗೆ ಹೆಚ್ಚು ಒತ್ತು ನೀಡಲಾಯಿತು ಆದರೆ ಕ್ರಮೇಣ ಅಸಮರ್ಪಕ ಹಣ ಹೂಡಿಕೆಯಿಂದ, ತಾನೇ ನಿಗಧಿ ಪಡಿಸಿದ ಲಕ್ಷ್ಯಗಳಿಂದ ಹಿಂದೆ ಸರಿದು, ಖಾಸಗಿ ಕ್ಷೇತ್ರಕ್ಕೆ ಒತ್ತು ಕೊಡುವ ಮತ್ತೊಂದು ಯೋಜನೆಯಾಗಿ ಸಾರ್ವಜನಿಕ-ಖಾಸಗಿ ಒಡಂಬಡಿಕೆಗಳ-PPPಗಳ (Public-private partnership, PPP) ವ್ಯಾಪಕ ವಿಸ್ತಾರವಾಗಲು ಕಾರಣವಾಯಿತು. ಆದರೆ ಈವರೆಗೆ PPPಗಳು ಜನರ ಆರೋಗ್ಯವನ್ನು ಸುಧಾರಿಸಲು ಅಥವಾ ಆರೋಗ್ಯದ ಹಕ್ಕುಗಳನ್ನು ಕಾಪಾಡುವಲ್ಲಿ ಯಶಸ್ವಿಯಾಗಿವೆಯೆಂಬುದಕ್ಕೆ ಯಾವುದೇ ಪುರಾವೆಯಿಲ್ಲ. ಆದರೆ ಖಾಸಗಿ ಕ್ಷೇತ್ರವು ಯಾವುದೇ ನಿಯಂತ್ರಣಕ್ಕೆ ಒಳಗೊಳ್ಳದೆ, ಆರೋಗ್ಯ ಕ್ಷೇತ್ರದಲ್ಲಿ ಲಾಭಕೋರತನ, ವ್ಯಾಪಾರೀಕರಣದ, ಅನೈತಿಕ, ಅನಗತ್ಯ ಸೇವೆಗಳ ಹೆಚ್ಚಳಕ್ಕೆ ಕಾರಾಣ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ.

## ರಾಷ್ಟ್ರೀಯ ಆರೋಗ್ಯ ನೀತಿ – 2017 – ಮುಂದುವರೆದ ಖಾಸಗಿ ಕ್ಷೇತ್ರದೊಡನೆಯ ಪ್ರಣಯ (ಸರಸಾಟ)

ಆರೋಗ್ಯದ ಖಾಸಗೀಕರಣ ಹಾಗೂ ವ್ಯಾಪಾರೀಕರಣಕ್ಕೆ ಮತ್ತಷ್ಟು ಪುಷ್ಠಿ ನೀಡುವುದಾಗಿದೆ. ಪ್ರಾಥಮಿಕ ಸೇವೆಗಳಲ್ಲಿ ಸರ್ಕಾರಿ ವ್ಯವಸ್ಥೆಗೆ ಆದ್ಯತೆ ನೀಡಿದೆಯಾದರೂ, ದ್ವಿತೀಯ ಹಾಗೂ ತೃತೀಯ ಸೇವೆಗಳಲ್ಲಿ 'ಸರ್ಕಾರೇತರ' ಸಂಸ್ಥೆಗಳೊಡನೆ ಒಪ್ಪಂದ/ಒಡಂಬಡಿಕೆ ಮಾಡಿಕೊಳ್ಳುವುದರ ಬಗ್ಗೆ ಸ್ಪಷ್ಟವಾಗಿ ವ್ಯಕ್ತ ಪಡಿಸಿದೆ. ಅಂದರೆ ಈಗ ಪ್ರಸ್ತುತ ಇರುವ ಸರ್ಕಾರಿ–ಖಾಸಗಿ ಒಡಂಬಡಿಕೆಳು (PPP) ಹಾಗೂ ವಿಮೆ ಆಧಾರಿತ ಕಾರ್ಯಕ್ರಮಗಳಿಗೆ ಯಾವುದೇ ಕಡಿವಾಣ ಬೀಳುವ ಸಾದ್ಯತೆ ಕಡಿಮೆಯೆ. ದೇಶಾದ್ಯಂತ ವಿವಿಧ ಅಧ್ಯಯನಗಳು ಈ ಒಡಂಬಡಿಕೆಗಳು ಜನತೆಗೆ ಗುಣಮಟ್ಟ ಆಧಾರಿತ, ಉಚಿತ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ವಿಫಲವಾಗಿವೆ ಎಂದು ಸ್ಪಷ್ಟವಾಗಿ ಪುರಾವೆಗಳನ್ನು ತೋರಿಸಿವೆ. ಹೀಗಿದ್ದರೂ ಸಹ ಸರ್ಕಾರಗಳು ಖಾಸಗಿಯೊಡನೆಯ ಸರಸಾಟವನ್ನು ಕೈ ಬಿಡಲು ತಯಾರಿಲ್ಲ. ಈ ನೀತಿಪತ್ರದಲ್ಲಿ ಕೆಲವೊಂದು ವಿಶೇಷ ಪರಿಕಲ್ಪನೆಗಳನ್ನು ಹಾಗೂ ಪದಗಳನ್ನು ಬಳಸಲಾಗಿದೆ. ನೀತಿಪತ್ರದಲ್ಲಿ ಮುಖ್ಯ ಪದ 'strategic purchasing'(ಕುಶಲ ಖರೀದಿ). ಇದರ ಅರ್ಥ ಸರ್ಕಾರವು(ಗಳು) ಇನ್ನು ಮುಂದೆ ಸೇವೆಗಳ ಮುಖ್ಯ ಪ್ರದಾತನಾಗದೇ ಕೇವಲ ಸೇವೆಗಳನ್ನು ಮಾರುಕಟ್ಟೆಯಲ್ಲಿ ಖಾಸಗಿ ವ್ಯವಸ್ಥೆಗಳಿಂದ ಖರೀದಿಸುವುದು(ವವು). ಖಾಸಗೀಕರಣವೇ ಇದರಲ್ಲಿ ಅಡಗಿರುವ ಕುಶಲತೆ. ಇದಕ್ಕೆ ಲಗತ್ತಾಗಿ ಮತ್ತೊಂದು ಮುಖ್ಯ ಪದ 'ಆಶ್ವಾಸನೆ' (Assurance) ಇದು ಶಬ್ದಗಳ ಮುಖೇನ ಜನತೆಯ ವಿರದ್ಧ ನಡೆಸಿರುವ ಸನ್ನಾಹ. ವಿಮೆ (Insurance) ಎಂದು ಹೇಳಿದಲ್ಲಿ ಅದರ ಬಂಡವಾಳ ಬಹಿರಂಗವಾಗುವುದೆಂದು Assurance ಪದವನ್ನು ಪ್ರಯೋಗಿಸಲಾಗಿದೆ. ಏಕೆಂದರೆ ವಿಶ್ವಾದ್ಯಂತ ವಿಮೆಯ ಮೂಲಕ ಖಾಸಗಿಗೆ ಹೆಚ್ಚು

ಒತ್ತು ಕೊಟ್ಟಿರುವ ಯಾವುದೇ ದೇಶವೂ (ಉದಾ. ಅಮೆರಿಕ) ತನ್ನ ಜನತೆಗೆ ಸಮಂಜಸ ಆರೋಗ್ಯ ಸೇವೆಗಳನ್ನು ನ್ಯಾಯಯುತವಾಗಿ, ಸಮತೆಯ ಆಧಾರದ ಮೇಲೆ ತಲುಪಿಸಲು ವಿಫಲವಾಗಿವೆ. ಅಂದ ಹಾಗೆ Assurance ಪದಕ್ಕೆ ನಾವು ನಿಘಂಟಿನಲ್ಲಿ ಅನುವಾದ ಹುಡುಕಿದಲ್ಲಿ ಅದು 'ವಿಮೆ' ಎಂದೇ ತೋರಿಸುವುದು! ದೇಶಕ್ಕೆ ಈ ಒಂದು ವಂಚನೆಯ ಶಬ್ದದ ಕೊಡುಗೆ ನಮ್ಮ ಕರ್ನಾಟಕ ಸರ್ಕಾರದ್ದೇ! ದೇಶದಲ್ಲಿ ಕರ್ನಾಟಕದ 'ಆರೋಗ್ಯ ಶ್ರೀ' ಯೋಜನೆಯಲ್ಲಿ ಖಾಸಗಿಯವರಿಂದ ಸೇವೆಗಳನ್ನು ಖರೀದಿಸಲು ಉಪಯೋಗಿಸಿದ 'ಕುಶಲ'ತೆ. ಕರ್ನಾಟಕ ಸರ್ಕಾರವು ಖಾಸಗೀ ಕ್ಷೇತ್ರದೊಡನೆಯ ಒಡಂಬಕೆಯಲ್ಲಿ ದೇಶದಲ್ಲಿ ಅಗ್ರಸರ ಹಾಗೂ ಮಾದರಿ. ಇತ್ತೀಚೆಗೆ ಹೆಚ್ಚು ಸುದ್ದಿ ಮಾಡಿರುವ ಗರ್ಭಕೋಶದ ಅನೈತಿಕ ಶಸ್ತ್ರಚಿಕಿತ್ಸೆಗಳು Assuranceನ ಒಂದು ಪರಿಣಾಮ. ಇನ್ನೊಂದು ವಿಶೇಷವೆಂದರೆ ನೀತಿ ಪತ್ರದಲ್ಲಿ ಅತ್ಯಂತ ವಿಸ್ತಾರವಾಗಿ ಉಲ್ಲೇಖವಾಗಿರುವ ವಿಭಾಗ ಖಾಸಗಿ ಕ್ಷೇತ್ರದೊಡನೆಯ ಒಡಂಬಡಿಕೆ ಬಗ್ಗೆ. ಇದಕ್ಕೆ ಮತ್ತೊಂದು ಪುಷ್ಠಿ ಇತ್ತೀಚೆಗೆ ಕೇಂದ್ರ ಸರ್ಕಾರವು ಪ್ರಕಟಿಸಿರುವ **"ರಾಷ್ಟ್ರೀಯ ಆರೋಗ್ಯ ರಕ್ಷಣಾ ಯೋಜನೆ" (National Health Protection Scheme).** ಇದಕ್ಕೆ ಆಯುಷ್ಮಾನ್ ಭಾರತ ಎಂಬ ಇನ್ನೊಂದೂ ಹೆಸರಿಡಲಾಗಿದೆ. ಇದೂ ಸಹ ವಿಮೆ ಆಧಾರಿತ ಖಾಸಗಿ ಕ್ಷೇತ್ರದಿಂದ ಕೆಲವೊಂದು ದ್ವಿತೀಯ, ತೃತೀಯ ದರ್ಜೆ ಸೇವೆಗಳನ್ನು ಪಡೆದುಕೊಳ್ಳುವ ಯೋಜನೆಯಾಗಿದೆ. ಪ್ರಾಥಮಿಕ ಆರೋಗ್ಯ ಸೇವೆಗಳಿಗೆ ಆದ್ಯತೆ ಇಲ್ಲಿ ಇಲ್ಲ.

## ರಾಷ್ಟ್ರೀಯ ಆರೋಗ್ಯ ಸಭೆ - 3, *ರಾಯಪುರ, ಚತ್ತೀಸ್ಗಡ -*

***September 2018***

ಮೂರನೇ ರಾಷ್ಟ್ರೀಯ ಆರೋಗ್ಯ ಸಭೆಯನ್ನು September 2018ರಲ್ಲಿ ರಾಯಪುರ, ಚತ್ತೀಸ್ಗಡದಲ್ಲಿ ನಡೆಸಲು ಆಂದೋಲನದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ನಿರ್ಧರಿಸಲಾಗಿದೆ. ಈ ಸಭೆಯ ಘೋಷಣೆ "***ಆರೋಗ್ಯ ಮತ್ತು ಆರೋಗ್ಯಸೇವೆಗಳನ್ನು ಮೂಲಭೂತ ಹಕ್ಕಾಗಿ ಮಾಡುವ ಸಮಯ, ಈಗ ಬಂದಿದೆ.*** ಈ ಸಭೆಯ ಮುಖ್ಯ ಉದ್ದೇಶ, ಆರೋಗ್ಯಕ್ಕಾಗಿ ಹೋರಾಟ ನಡೆಸುತ್ತಿರುವ ವಿವಿಧ ಸಂಘಟನೆಗಳನ್ನು, ಆಂದೋಲನಗಳನ್ನು, ಆರೋಗ್ಯ ಕಾರ್ಯಕರ್ತರುಗಳನ್ನು, ಸಾಮಾಜಿಕ ಸಂಸ್ಥೆಗಳನ್ನು, ದಾರ್ಶನಿಕರನ್ನು ಹಾಗೂ ಆರೋಗ್ಯದ ಬಗ್ಗೆ ಕಳಕಳಿಯಿರುವ ಎಲ್ಲರನ್ನೂ, ಆರೋಗ್ಯ ವಿಷಯವನ್ನು ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಮುಖ್ಯ ವಿಷಯವನ್ನಾಗಿ ಮಾಡುವುದಾಗಿದೆ. ಇದೇ ಸಮಯ, ಬಾಂಗ್ಲಾದೇಶದ ಢಾಕಾದಲ್ಲಿ ವಿಶ್ವ ಜನಾರೋಗ್ಯ ಸಭೆ ನಡೆಯಲಿದೆ ಅದಕ್ಕೆ ಪೂರ್ವಭಾವಿಯಾಗಿ ರಾಷ್ಟ್ರ, ರಾಜ್ಯ ಹಾಗೂ ತಳ ಮಟ್ಟದಲ್ಲಿ ಸಹ ಆರೋಗ್ಯದ ವಿಷಯದಲ್ಲಿ **ಜನರನ್ನು** ಒಗ್ಗೂಡಿಸುವ ಸಲುವಾಗಿ ಏರ್ಪಡಿಸಲಾಗಿದೆ. ದೇಶದ ಹಲವಾರು ಕಡೆಗಳಿಂದ ಸುಮಾರು 1500 ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆ ಇದೆ. ಸಭೆಯ ಮುಖ್ಯ ಧೋರಣೆಗಳು ಇಂತಿವೆ:

1. ಸಾರ್ವಜನಿಕ ಅರೋಗ್ಯ ವ್ಯವಸ್ಥೆಗಳನ್ನು ಸಮರ್ಥಿಸುವದು.

2. ಆರೋಗ್ಯ ಸೇವೆಗಳು ಮತ್ತು ಖಾಸಗೀಕರಣ
3. ಲಿಂಗ ತಾರತಮ್ಯ ಮತ್ತು ಆರೋಗ್ಯ
4. ಔಷಧಿಗಳ ಮತ್ತು ವಿವಿಧ ಪರೀಕ್ಷೆಗಳ ಲಭ್ಯತೆ
5. ಆರೋಗ್ಯದ ಸಾಮಾಜಿಕ ನಿರ್ಧಾರಕಗಳು

ಈ ಸಭೆಗೆ ಮುಖ್ಯವಾದ ಸಂದರ್ಭ ಪ್ರಸ್ತುತ ರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯಲ್ಲಿ ಸಾಮಾಜಿಕ ವಿಷಯಗಳಾದ ಆರೋಗ್ಯ ಹಾಗೂ ಶಿಕ್ಷಣವನ್ನು ಕಡೆಗಣಿಸಲ್ಪಟ್ಟು ಬಜೆಟ್ ಹಣವನ್ನು ಕಡಿತಗೊಳಿಸಲಾಗಿರುವುದು. ಇದಲ್ಲದೆ ಕೋಮುವಾದ, ದಲಿತರ, ಮಹಿಳೆಯರ ಹಾಗೂ ಅಲ್ಪಸಂಖ್ಯಾತ ಜನಗಳ ಮೇಲಿನ ಅತ್ಯಾಚಾರ ಹಾಗೂ ಮೂಲಭೂತವಾದ ಹೆಚ್ಚಾಗುತ್ತಿರುವುದು ಹಾಗೂ ಇಂತಹ ಸಂದರ್ಭದಲ್ಲಿ ಆರೋಗ್ಯದ ಹಕ್ಕಿನ ಸ್ಥಾಪನೆಗಾಗಿ ರಣನೀತಿ ತಯಾರಿಸಬೇಕಾಗುವ ಪರಿಸ್ಥಿತಿ ಬಂದಿದೆ.

**ರಾಷ್ಟ್ರೀಯ ಆರೋಗ್ಯ ಸಭೆ - 3,**

**ದಿನಾಂಕ: 22 ಮತ್ತು 23, September 2018**

**ಸ್ಥಳ: ರಬೀಂದ್ರ ಭವನ, ಕಾಳಿಬಾಡಿ ರಸ್ತೆ, ರಾಯಪುರ, ಚತ್ತೀಸ್ಗಡ ರಾಜ್ಯ**

**ಬನ್ನಿ ಔಷಧಗಳನ್ನು ಜನರ ಕೈಗೆಟುವ ಬೆಲೆಯಲ್ಲಿ ಲಭ್ಯ ಮಾಡುವ ಜನಾಂದೋಲನದಲ್ಲಿ ಭಾಗವಹಿಸಿರಿ.**

**“ರಾಷ್ಟ್ರೀಯ ಜನಾರೋಗ್ಯ ಸಮಾವೇಶ ಕರ್ನಾಟಕ–೨೦೧೮ (RJSK-2018)”**

**ಸಪ್ಟೆಂಬರ 16, ಭಾನುವಾರ, ಸಮಯ; 10 ರಿಂದ 4 ರ ವರೆಗೆ,**

**ಸ್ಥಳ;–** ಜೈನ ವಿಶ್ವವಿದ್ಯಾಲಯ (ವಿವಿ), ಪ್ಯಾಲೇಸ್ ರೋಡ, ಬೆಂಗಳೂರು.

ಆರೋಗ್ಯ ಮುಲಭೂತ ಹಕ್ಕು ಅದನ್ನು ಪಡೆಯುವ ಪ್ರಾಮಾಣಿಕ ಪ್ರಯತ್ನದಲ್ಲಿ ಪ್ರಥಮ ಹೆಜ್ಜೆಯಾಗಿ ಈ ಸಮಾವೇಶವನ್ನು ಆಯೋಜಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಆಸಕ್ತರು ಬಂದು ಭಾಗವಹಿಸಬೇಕೆಂದು ಮನವಿ.

ಸಂಪರ್ಕ ನಂ. 9448862270/9480554675/9916937280.

**ಪ್ರಕಾಶಕರ ವಿಳಾಸ:- ಪ್ರಧಾನ ಮಂತ್ರಿ ಭಾರತೀಯ ಜನಔಷಧಿ ಕೇಂದ್ರ (ಪಿ.ಎಮ್.ಬಿ.ಜೆ.ಕೆ),**
ಎಫ್ – **12**, ಮಾಧವ ಸ್ಕ್ವೇರ್ ಕಾಂಪ್ಲೆಕ್ಸ್, ಸ್ಟೇಶನ್ ರಸ್ತೆ, ಮಾಳಮಡ್ಡಿ, ಧಾರವಾಡ **580007. 9448862270**

**BOOK-POST / PRINTED MATTER**

To,